# ಕಾಳಿದಾಸನ ಕಾವ್ಯಗಳಲ್ಲಿ ಭಕ್ತಿ

ಪ್ರೊ. ಎಂ.ಎನ್. ಚಂದ್ರಶೇಖರ

ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿರುವ ಲೇಖಕರು ಸಂಕ್ಷಿಪ್ತವಾಗಿ ಮಹಾಕವಿ ಕಾಳಿದಾಸನ ಭಕ್ತಿಯ ಭಾವನೆಗಳನ್ನು ತಿಳಿಸಿದ್ದಾರೆ.

**ಪ**ರ್ವತಗಳಲ್ಲಿ ಹಿಮಾಲಯವು ಎಷ್ಟು ಉನ್ನತವೋ, ಕವಿಗಳಲ್ಲಿ ಅಷ್ಟು ಶ್ರೇಷ್ಠನಾದವನು ಕವಿಕುಲಗುರು ಕಾಳಿದಾಸ. ಲೋಕದಲ್ಲಿ ಸಾಮಾನ್ಯವಾಗಿ ಕಾಳಿದಾಸನನ್ನು ಶೃಂಗಾರಕವಿ ಎಂದು ಗುರುತಿಸುತ್ತಾರೆಯೇ ಹೊರತು ಅವನ ಪ್ರಕೃತಿಪ್ರೇಮ, ಭಕ್ತಿ, ಧರ್ಮ, ಜ್ಞಾನಗಳ ಬಗ್ಗೆ ಮಾತೇ ಆಡುವುದಿಲ್ಲವಲ್ಲ ಎಂದೆನಿಸುತ್ತದೆ. ಆನೆಯನ್ನು, ಅದರ ಗತಿಯನ್ನು ನೋಡಿ ಸಂತಸ ಪಡುವ ನಾವು ಕೇವಲ ಸೊಂಡಿಲನ್ನೋ, ಕಾಲನ್ನೋ ವರ್ಣಿಸಿದರೆ ಸಾಕೆ? ಕಾಳಿದಾಸನ ಕೃತಿಗಳನ್ನು ನಾವು ಯಾವ ದೃಷ್ಟಿಯಿಂದ ನೋಡಿದರೂ, ಓದಿದರೂ ಅವನು ನಮಗೆ ಮನಮೋಹಕನಾಗುತ್ತಾನೆ.

ಭಾರತೀಯ ದಾರ್ಶನಿಕರು ವೇದ, ಉಪನಿಷತ್ತು, ಭಗವದ್ಗೀತೆ ಮುಂತಾದ ಧರ್ಮಗ್ರಂಥಗಳಲ್ಲಿ ಯಾವ ಭಕ್ತಿ, ಕರ್ಮ, ಜ್ಞಾನಗಳನ್ನು ಕೊಂಡಾಡಿದರೋ ಅವುಗಳನ್ನು ಅಂದಿನ ಯುವಪೀಳಿಗೆಗೆ ಆಪ್ಯಾಯಮಾನವಾಗಿ ಕೊಟ್ಟಿರುವ ಮಹಾಕವಿಗಳಲ್ಲಿ ಕಾಳಿದಾಸನು ಅಗ್ರಪಂಕ್ತಿಗೆ ಸೇರುವ ಮಹಾ ಮಹಿಮ. ಅವನ ಕಾವ್ಯಗಳನ್ನು ಓದಿದಷ್ಟೂ ನಮಗೆ ಅವುಗಳಲ್ಲಿನ ಸ್ವಾದ ರುಚಿಸುತ್ತಾ ಹೋಗುತ್ತದೆ.

**ಏಕಂ ಸತ್ ವಿಪ್ರಾ ಬಹುಧಾ ವದಂತಿ**—ಸತ್ಯವು ಒಂದೇ, ಅದನ್ನೇ ತಿಳಿದವರು ಬೇರೆಬೇರೆಯಾಗಿ ಹೇಳುತ್ತಾರೆ ಎಂಬ ವೇದವಾಣಿ ಮೊಳಗಿದಂತಹ ನಮ್ಮ ದೇಶದಲ್ಲಿ ಕವಿಯ ಜೀವಿತಕಾಲದಲ್ಲೂ ನಾವು ದೇವತಾವಿಚಾರವಾಗಿ ಭಿನ್ನ ಭಿನ್ನವಾಗಿ ಹೋಗಿದ್ದೆವು. ಆ ಸಮಯದಲ್ಲಿ ಮಹಾಕವಿಯ ಭಕ್ತಿಭಾವ ನಮ್ಮನ್ನೆಲ್ಲ ಒಂದುಗೂಡಿಸಲು ಸಹಾಯ ಮಾಡಿದೆ. ತಾನು ಜನ್ಮತಃ ಶಿವಭಕ್ತನಾದರೂ ದೇವತಾವಿಷಯದಲ್ಲಿ ಭೇದವಿಲ್ಲವೆಂದು ತೋರಿಸಲು, ರಾಮನ ಕಥೆಯಾದ ರಘುವಂಶವನ್ನು **ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ, ಜಗತಃ ಪಿತರೌ ವಂದೇ ಪಾರ್ವತೀ ಪರಮೇಶ್ವರೌ**— 'ಶಬ್ದ ಮತ್ತು ಅದರ ಅರ್ಥದಂತೆ ಅಭಿನ್ನ ಸಂಪರ್ಕವನ್ನು ಹೊಂದಿರುವ, ಜಗತ್ತಿಗೇ ತಾಯಿತಂದೆಯರಾದ ಪಾರ್ವತೀ ಪರಮೇಶ್ವರರಿಗೆ ವಂದಿಸುತ್ತೇನೆ, ಶಬ್ದ-ಅರ್ಥಗಳ ಜ್ಞಾನವನ್ನು ಅವರು ಕರುಣಿಸಲಿ', ಎಂಬ ಪ್ರಾರ್ಥನೆಯಿಂದ ಪ್ರಾರಂಭ ಮಾಡುತ್ತಾನೆ. 'ಕುಮಾರಸಂಭವ'ದಲ್ಲಿ ನಾವು ಸಂಕುಚಿತರಾಗಿ ತರತಮವನ್ನು ತೋರಿಸಬಾರದೆಂಬುದನ್ನು ತಿಳಿಸಲೋ ಎಂಬಂತೆ 'ದೇವನೊಬ್ಬ ನಾಮ ಹಲವು' ಎನ್ನುವುದನ್ನು **ಏಕೈವ ಮೂರ್ತಿಃ ಬಿಭಿದೇ ತ್ರಿಧಾ ಸಾ**— ಒಂದೇ ಮೂರ್ತಿಯು ಮೂರಾಗಿ ಬ್ರಹ್ಮ-ವಿಷ್ಣು-ಶಿವರಾಗಿ ತೋರಿದೆ ಎಂದು ತಿಳಿಸುತ್ತಾನೆ. 'ಕುಮಾರಸಂಭವ'ದಲ್ಲಿ ಬ್ರಹ್ಮ-ಶಿವರನ್ನು ಹೃದಯಂಗಮವಾಗಿ ಕೊಂಡಾಡಿದರೆ ರಘುವಂಶದಲ್ಲಿ ವಿಷ್ಣುವನ್ನು ಬಹಳ ಸುಂದರವಾಗಿ ಸ್ತುತಿಸಿದ್ದಾನೆ.

## ಕಾಳಿದಾಸನ ಪ್ರಮುಖ ಕೃತಿಗಳಲ್ಲಿ ಭಕ್ತಿಯ ಅಭಿವ್ಯಕ್ತಿಯನ್ನು ಕುರಿತು ವಿಶ್ಲೇಷಣೆ

### ಕುಮಾರಸಂಭವ

ತಾರಕಾಸುರನು ದೇವತೆಗಳಿಗೂ ಮನುಷ್ಯರಿಗೂ ತುಂಬ ತೊಂದರೆ ಕೊಡುತ್ತಿರುತ್ತಾನೆ. ಆಗ ದೇವತೆಗಳು ಬ್ರಹ್ಮನ ಸಮೀಪಕ್ಕೆ ಹೋಗಿ ಕಳಕಳಿಯಿಂದ ಪ್ರಾರ್ಥಿಸುತ್ತಾರೆ: "ಹೇ ದೇವ! ನೀನು ಸೃಷ್ಟಿಗೆ ಮೊದಲು ಏಕಸ್ವರೂಪನಾಗಿದ್ದು, ನಂತರ ಸತ್ವ-ರಜ-ತಮೋಗುಣಗಳುಳ್ಳ ಬ್ರಹ್ಮ-ವಿಷ್ಣು-ರುದ್ರ ಸ್ವರೂಪನಾಗಿರುವೆ. ನಿನಗೆ ನಮಸ್ಕಾರ. ಚರಾಚರಗಳನ್ನು ಸೃಷ್ಟಿಸಿ ನೀನೇ ಪ್ರಭವ ಎಂದು ಹೊಗಳಲ್ಪಡುತ್ತಿರುವೆ. ನೀನೇ ಪ್ರಳಯ-ಸೃಷ್ಟಿ-ಸ್ಥಿತಿಗಳಿಗೆ ಕಾರಣ. ನೀನು ಎದ್ದಾಗ ಪ್ರಪಂಚದ ಸೃಷ್ಟಿ, ನೀನು ಮಲಗಿದಾಗ ಪ್ರಪಂಚವು ಲಯವಾಗುತ್ತದೆ. ನೀನು ಜಗತ್ತಿಗೆ ಕಾರಣ, ಆದರೆ ಅನಾದಿಯಾದ್ದರಿಂದ ಅಕಾರಣನೂ, ಆಗಿದ್ದೀಯೆ. ನೀನು ಪ್ರಪಂಚದ ಸಂಹಾರಕ; ಆದರೆ ನೀನೋ ಅಂತವಿಲ್ಲದವನು. ನೀನು ಜಗತ್ತಿಗೇ ಆದಿ ಪುರುಷ, ಸೃಷ್ಟಿಯ ಮೊದಲೂ ಇದ್ದವನು; ಆದ್ದರಿಂದ ನೀನು ಅನಾದಿಯೂ ಆಗಿದ್ದೀಯೆ. ನೀನು ಜಗತ್ತಿಗೇ ಒಡೆಯ; ಪರಮಾತ್ಮನಾದ್ದರಿಂದ ನಿನಗೆ ಒಡೆಯರು ಯಾರೂ ಇಲ್ಲ." **ಯತೋ ವಾ ಇಮಾನಿ ಭೂತಾನಿ ಜಾಯಂತೇ**—ಯಾವುದರಿಂದ, ಎಲ್ಲಿಂದ ಈ ಭೂತಗಳೆಲ್ಲವೂ ಜನಿಸುತ್ತವೆಯೋ ಎಂಬ ವೇದವಾಕ್ಯವನ್ನು ಎಷ್ಟು ಚೆನ್ನಾಗಿ, ಹೃದಯಂಗಮವಾಗಿ ಆದಿ-ಅಂತ್ಯವಿಲ್ಲದವನು ಎಂದು ವಿರೋಧಾಭಾಸ ಅಲಂಕಾರದ ಮೂಲಕ ತಿಳಿಸಿದ್ದಾನೆ.

**ಜಗದ್ಯೋನಿರಯೋನಿಸ್ತ್ವಂ ಜಗದಂತೋ ನಿರಂತಕಃ**

**ಜಗದಾದಿರನಾದಿಸ್ತ್ವಂ ಜಗದೀಶೋ ನಿರೀಶ್ವರಃ ॥**

"ಹೇ ದೇವ! ನೀನು ಪ್ರಣವಸ್ವರೂಪ. ಉದಾತ್ತಾದಿ ಸ್ವರಗಳ ಸ್ವರೂಪ. ಸಾಕ್ಷಾತ್ ವೇದಸ್ವರೂಪ. ನೀನು ಪಿತೃದೇವತೆಗಳಿಗೂ ದಕ್ಷಾದಿ ಪ್ರಜಾಪತಿಗಳಿಗೂ ದೇವನಾಗಿದ್ದೀಯೆ. ನೀನೇ ಹವ್ಯವಾದ ಹೋಮವಸ್ತುವೂ, ಯಜಮಾನನೂ, ಭೋಕ್ತೃವೂ ಆಗಿದ್ದೀಯೆ" ಎಂದು ಸ್ತುತಿಸಿದಾಗ ಗೀತೆಯ **ಬ್ರಹ್ಮಾರ್ಪಣಂ ಬ್ರಹ್ಮಹವಿಃ, ಬ್ರಹ್ಮಾಗ್ನೌ**—ಯಾವುದರಿಂದ ಅರ್ಪಿಸಲ್ಪಡುತ್ತಿರುವುದೋ ಅದೂ ಬ್ರಹ್ಮ, ಹವಿಸ್ಸೂ ಬ್ರಹ್ಮ, ಅಗ್ನಿಯೂ ಬ್ರಹ್ಮ... ಎಂಬ ಶ್ಲೋಕ ನೆನಪಿಗೆ ಬರದೆ ಇರುವುದಿಲ್ಲ.

**ಪಾರ್ವತಿಯ ಭಕ್ತಿ:**

ದೇವತೆಗಳು ಬ್ರಹ್ಮನನ್ನು ಈ ರೀತಿ ಪ್ರಾರ್ಥಿಸಿದರೆ, ಪಾರ್ವತಿಯ ಭಕ್ತಿಭಾವವನ್ನು ವರ್ಣಿಸುವುದು ಮತ್ತೂ ಅಸಾಧ್ಯ. ಸೌಂದರ್ಯದಿಂದ ಶಿವನನ್ನು ಆಕರ್ಷಿಸುವುದು ಪಾರ್ವತಿಗೆ ಸಾಧ್ಯವಾಗಿಲ್ಲ. ಸೌಂದರ್ಯವನ್ನು ಮುಂದಿಟ್ಟುಕೊಂಡು ಏಕಾಗ್ರತೆಯನ್ನು ಕೆಡಿಸಿದ ಮನ್ಮಥನನ್ನು ಭಸ್ಮ ಮಾಡಿದ ಶಿವನನ್ನು ಕಂಡು **ನಿನಿಂದ ರೂಪಂ ಹೃದಯೇನ ಪಾರ್ವತೀ**—ಉಮೆಯು ತನ್ನ ದೈಹಿಕ ಸೌಂದರ್ಯವನ್ನು ಜರೆದು ಭಕ್ತಿಯಿಂದ, ಆತ್ಮಸೌಂದರ್ಯದಿಂದ ಶಿವನನ್ನು ಗೆದ್ದೇ ಗೆಲ್ಲುತ್ತೇನೆ ಎಂದು ನಿಶ್ಚಯಿಸಿ ತಪಸ್ಸಿಗೆ ಬಂದಿದ್ದಾಳೆ. ಪಾರ್ವತಿಯ ಮೂಲಕ ನಮ್ಮೆಲ್ಲರಿಗೂ ದೈಹಿಕ ಸೌಂದರ್ಯ ಅಶಾಶ್ವತ; ಆತ್ಮಸೌಂದರ್ಯವನ್ನೂ, ಭಕ್ತಿಯನ್ನೂ ಬೆಳಸಿಕೊಳ್ಳಬೇಕೆಂದು ಈ ಪ್ರಸಂಗದಲ್ಲಿ ಕರೆ ಕೊಡುತ್ತಿದ್ದಾನೆ, ಕವಿಕುಲತಿಲಕ.

ಪಾರ್ವತಿಯು ಅರಮನೆಯನ್ನೂ, ಹಂಸತೂಲಿಕಾತಲ್ಪವನ್ನೂ, ಸುಖಲೋಲುಪತೆಗಳನ್ನೂ ಬಿಟ್ಟು ತದೇಕಚಿತ್ತದಿಂದ ಚಂದ್ರಮೌಳಿಯನ್ನು ಕುರಿತು ಉರಿಬೇಸಿಗೆಯಲ್ಲಿ ಪಂಚಾಗ್ನಿ ತಪಸ್ಸನ್ನೂ, ಮಳೆಗಾಲದಲ್ಲಿ ಹಿಮಾಲಯದ ಕಲ್ಲುಬಂಡೆಗಳ ಮೇಲೆ ನಿಂತೂ, ಛಳಿಗಾಲದಲ್ಲಿ ಕೊರೆಯುವ ಗಂಗೆಯಲ್ಲಿ ನಿಂತೂ ಕಠೋರವಾದ ತಪಸ್ಸನ್ನು ಆಚರಿಸುತ್ತಿದ್ದಾಳೆ. ಪ್ರತಿನಿತ್ಯವೂ ತಾನೇ ಹೂವುಗಳನ್ನು ಕಿತ್ತು, ಪವಿತ್ರವಾದ ನೀರನ್ನು ತಂದು, ಅಗ್ನಿಯನ್ನು ಆರಾಧಿಸಿ ಪೂಜಾದಿ ವ್ರತಗಳನ್ನು ಕೈಗೊಂಡಿದ್ದಾಳೆ. ಅಂತಹ ಮಹಾನುಭಾವೆಯನ್ನು ಕಾಣಲು, ಅವಳ ದರ್ಶನ ಪಡೆಯಲು ಮಹರ್ಷಿಗಳು ನಾ ಮುಂದು ತಾ ಮುಂದು ಎಂದು ಬರುತ್ತಿದ್ದಾರಂತೆ.

**ಕೃತಾಭಿಷೇಕಾಂ ಹುತಜಾತವೇದಸಂ**
**ತ್ವಗುತ್ತರಾಸಂಗವತೀಂ ಅಧೀತಿನೀಂ ।**
**ದಿದೃಕ್ಷವಸ್ತಾಮೃಷಯೋಽಭ್ಯುಪಾಗಮನ್**
**ನ ಧರ್ಮವೃದ್ಧೇಷು ವಯಃ ಸಮೀಕ್ಷ್ಯತೇ॥**

ಧರ್ಮವೃದ್ಧರಲ್ಲಿ ವಯಸ್ಸು ಮುಖ್ಯವಾಗುವುದಿಲ್ಲವಂತೆ. ಪಾರ್ವತಿಯ ಕುರಿತು ಕಾಳಿದಾಸ ಎಂತಹ ಹೆಮ್ಮೆಯ ಮಾತಾಡಿದ್ದಾನೆ! ಭಕ್ತಿಯಿಂದ ತನ್ನ ತಪಸ್ಸನ್ನು ಉಗ್ರಗೊಳಿಸುತ್ತ ಅನ್ನ, ಆಹಾರಾದಿಗಳನ್ನು ತೊರೆದು, ಒಣಗಿದ ಎಲೆಯನ್ನೂ ಸೇವಿಸದೆ 'ಅಪರ್ಣಾ' ಎಂಬ ಅನ್ವರ್ಥನಾಮವನ್ನು ಪಾರ್ವತಿ ಪಡೆದಿದ್ದಾಳೆ: **ವದಂತ್ಯಪರ್ಣೇತಿ ಚ ತಾಂ ಪುರಾವಿದಃ.** ಭಕ್ತಾಗ್ರೇಸರಳಾದ ಪಾರ್ವತಿಯು, ಬ್ರಹ್ಮಚಾರಿಯ ವೇಷದಲ್ಲಿ ಬಂದ ಶಿವನು ತನ್ನನ್ನು ನಾನಾ ಪ್ರಕಾರವಾಗಿ ಬೂದಿಬಡುಕ, ಸ್ಮಶಾನವಾಸಿ, ಬಡವ, ಕುರೂಪಿ ಮುಂತಾದ ಕಠೋರ ಶಬ್ದಗಳಿಂದ ನಿಂದಿಸಿಕೊಂಡರೂ ತಿಳಿಯದೆ, ತನ್ನ ಅಚಲ ಭಕ್ತಿಯಿಂದ ಆ ಕಠೋರವಾದ ಶಬ್ದಗಳನ್ನು ಮಂಗಳಮಯವಾಗಿಸಿ ಜಗತ್ತಿಗೇ ತಂದೆಯಾದ ಶಿವನ ಕೈಹಿಡಿದು ತಾನೂ ಜಗನ್ಮಾತೆ ಯಾಗಿ ಮೆರೆದಿದ್ದಾಳೆ.

ಮುಂದೆ ಪಾರ್ವತಿ ಪರಮೇಶ್ವರರ ಮದುವೆಗೆ ಬಂದಾಗ ಸಪ್ತರ್ಷಿಗಳು ಶಿವನನ್ನು ಸ್ತೋತ್ರ ಮಾಡುವ ಸಂದರ್ಭವಂತೂ ಧನ್ಯತಾಭಾವವೆಂದರೆ ಹೇಗಿರಬೇಕೆಂಬುದನ್ನು ತಿಳಿಸುತ್ತ ನಮ್ಮೆಲ್ಲರನ್ನೂ ಪುಳಕಿತಗೊಳಿಸುವುದರಲ್ಲಿ ಸಂದೇಹವೇ ಇಲ್ಲ. "ಹೇ ದೇವ! ಯಾವ ಕಾರಣದಿಂದ ಇಷ್ಟು ದಿನ ವೇದಾಧ್ಯಯನ ಮಾಡಿದ್ದೆವೋ, ವಿಧಿವತ್ತಾಗಿ ಅಗ್ನಿಯಲ್ಲಿ ಯಾವ ಆಹುತಿಯನ್ನು ಅರ್ಪಿಸಿದೆವೋ, ಯಾವ ಕಾರಣದಿಂದ ತಪಸ್ಸನ್ನು ಆಚರಿಸಿದೆವೋ ಇಂದು ಅದು ಫಲ ಕೊಟ್ಟಿದೆ."

**ಯದ್‌ಬ್ರಹ್ಮ ಸಮ್ಯಕ್ ಆಮ್ನಾತಂ, ಯದಗ್ನೌ ವಿಧಿನಾ ಹುತಂ।**
**ಯಚ್ಚ ತಪ್ತಂ ತಪಸ್ತಸ್ಯ ವಿಪಕ್ವಂ ಫಲಮದ್ಯ ನಃ ॥**

"ಲೋಕದಲ್ಲಿ ಯಾರನ್ನು ಮನಸ್ಸಿನಲ್ಲಿ ನೆನೆಯುತ್ತೇವೆಯೋ ಅವನೇ ಶ್ರೇಷ್ಠ. ಇಂದು ನೀನು ಸಪ್ತರ್ಷಿಗಳಾದ ನಮ್ಮನ್ನು ನೆನೆದದ್ದರಿಂದ ನಾವು ಕೃತಾರ್ಥರಾದೆವು. ಎಲ್ಲ ಗ್ರಹಗಳಿಗಿಂತಲೂ ಪಂಚಭೂತಗಳಿಗಿಂತಲೂ ನಾವು ಇಂದು ಉನ್ನತ ಸ್ತರದಲ್ಲಿದ್ದೇವೆ. ನಮ್ಮ ಭಕ್ತಿಯನ್ನು ಮೆಚ್ಚಿ ನೀನು ನಮ್ಮನ್ನು ಸ್ಮರಿಸುತ್ತಿರುವುದು ನಮ್ಮಲ್ಲಿ ಹೆಮ್ಮೆಯನ್ನು, ವಿಶ್ವಾಸವನ್ನು ಮೂಡಿಸುತ್ತಿದೆ—**ಪ್ರಾಯಃ ಪ್ರತ್ಯಯಮಾಧತ್ತೇ ಸ್ವಗುಣೇಷು ಉತ್ತಮಾದರಃ.** ಪ್ರಪಂಚವನ್ನು ಸೃಷ್ಟಿಸಿ, ಪೋಷಿಸಿ, ಲೀನಗೊಳಿಸಿಕೊಳ್ಳುವ ಈ ಮೂರು ಕ್ರಿಯೆಗಳನ್ನುಳ್ಳ ನೀನು, ಈಗ ಯಾವ ರೂಪದಲ್ಲಿರುವೆ? ಬೇಗ ನಮಗೆ ನಿನ್ನ ಸೇವೆಯ ಭಾಗ್ಯವನ್ನು ಕೊಡು", ಎಂದು ವಿನಯದಿಂದ ಕೇಳುವುದು ನಮಗೆಲ್ಲ ಆದರ್ಶವಾಗಬೇಕು.

ನಮ್ಮ ಜೀವನದಲ್ಲಿ ನಮ್ಮ ಆಚಾರ್ಯರೂ, ಗುರುಗಳೂ, ಹಿರಿಯರೂ ನಮ್ಮ ವಿದ್ಯೆ, ಕರ್ತವ್ಯನಿಷ್ಠೆ, ಕೆಲಸಗಳಿಗಾಗಿ

ನಮ್ಮನ್ನು ಸ್ಮರಿಸಿದ್ದೇ ಆದರೆ ನಾವು ಧನ್ಯರು. ನಮ್ಮ ಸೇವೆಗೆ, ನಮ್ಮ ಭಕ್ತಿಗೆ ಫಲ ಬಂದಂತೇ ಆಗುತ್ತದೆ. ಲೋಕದಲ್ಲಿ ಭಕ್ತರು ದೇವರನ್ನು ನೆನೆಯುತ್ತಾರೆ. ಒಂದು ವೇಳೆ ದೇವರೇ ಭಕ್ತನನ್ನು ಸ್ಮರಿಸಿದರೆ, ಆ ಭಕ್ತನ ಭಕ್ತಿ ಎಷ್ಟು ಉದಾತ್ತವಾಗಿರಬೇಕು! ಇನ್ನೇನು ತಾನೆ ಬೇಕು ಭಕ್ತನಿಗೆ?

**ರಘುವಂಶ**

ರಾಜಾ ದಿಲೀಪನಿಗೆ ಮಕ್ಕಳಾಗಿಲ್ಲ. ಹಿಂದೆ ಮಾಡಿದ ದೋಷದ ಪರಿಹಾರಕ್ಕಾಗಿ, ನಂದಿನಿ ಧೇನುವಿನ ಸೇವೆ ಮಾಡಿದರೆ ಮಕ್ಕಳಾಗುವುದೆಂದು ಗುರು ವಸಿಷ್ಠರು ನುಡಿದಿದ್ದಾರೆ. ತತ್‌ಕ್ಷಣವೇ ಪತ್ನಿ ಸುದಕ್ಷಿಣೆಯೊಂದಿಗೆ ದಿಲೀಪನು ನಂದಿನಿಯ ಶುಶ್ರೂಷೆಯಲ್ಲಿ ಶ್ರದ್ಧಾಭಕ್ತಿಗಳಿಂದ ತೊಡಗುತ್ತಾನೆ. ಸುದಕ್ಷಿಣೆಯು ಭಕ್ತಿಯಿಂದ ಅರಿಶಿನ-ಕುಂಕುಮ-ಹೂವುಗಳಿಂದ ಅರ್ಚಿಸಿದರೆ, ದಿಲೀಪನು ರಾಜನಾಗಿದ್ದೂ ನಂದಿನಿಯ ಜೊತೆಯಲ್ಲಿ ಶ್ರದ್ಧೆ, ವಿನಯಗಳಿಂದ ಅದರ ಬೆಂಗಾವಲಾಗಿ ಹುಲ್ಲುಗಾವಲಿಗೆ, ಪರ್ವತ ಪ್ರದೇಶಕ್ಕೆ ಹೋಗುವುದು ನಮಗೆ ಆಶ್ಚರ್ಯವನ್ನು ಉಂಟುಮಾಡುತ್ತದೆ. ನಂದಿನಿ ಕುಳಿತರೆ ತಾನೂ ಕುಳಿತು ವಿಶ್ರಾಂತಿ ಪಡೆಯುವುದು; ಅದು ಹುಲ್ಲು, ಎಲೆ, ಹಣ್ಣುಗಳನ್ನು ಸೇವಿಸಿದರೆ ತಾನೂ ಯುಕ್ತವಾದ ಆಹಾರವನ್ನು ಸೇವಿಸುವುದು, ಅದು ಹೊರಟಾಗ ತಾನೂ ಹೊರಡುವುದು ಮುಂತಾದ ಕ್ರಿಯೆಗಳಿಂದ ತನ್ನ ಭಕ್ತಿಯನ್ನು ತೋರಿಸುತ್ತಾ ಅದನ್ನು ನೆರಳಿನಂತೆ ಹಿಂಬಾಲಿಸುವುದು ಏಕನಿಷ್ಠೆಯ ಸೇವೆಯೆಂದರೆ ಹೇಗೆ ಇರಬೇಕು ಎಂಬುದನ್ನು ತೋರಿಸಿಕೊಡುತ್ತದೆ. **ಸ್ಥಿತಃ ಸ್ಥಿತಾಂ ಉಚ್ಚಲಿತಃ ಪ್ರಯಾತಾಂ ನಿಷೇದುಷೀಂ ಆಸನಬಂಧಧೀರಃ । ಜಲಾಭಿಲಾಷೀ ಜಲಮಾದದಾನಾಂ ಛಾಯೇವ ತಾಂ ಭೂಪತಿರನ್ವಗಚ್ಛತ್॥** ಮುಂದೆ ಸಿಂಹವು ನಂದಿನಿಯನ್ನು ಆಹಾರಕ್ಕಾಗಿ ಹಿಡಿಯುತ್ತದೆ. ಆಗ ಸಿಂಹಕ್ಕೂ ದಿಲೀಪನಿಗೂ ನಡೆಯುವ ಸಂವಾದ; ನಂದಿನಿಗೆ ಬದಲಾಗಿ ತನ್ನ ದೇಹವನ್ನೇ ಅರ್ಪಿಸುವ ಉದಾತ್ತ ಮನೋಭಾವ ದಿಲೀಪನ ಭಕ್ತಿಗೆ, ಧರ್ಮನಿಷ್ಠೆಗೆ ಅಮೂಲ್ಯ ಉದಾಹರಣೆಯಾಗಿ ಧರ್ಮಪ್ರದೀಪನಾಗಿ ದಿಲೀಪನು ಪ್ರಕಾಶಿಸುವುದು ಸರ್ವರಿಗೂ ತಿಳಿದ ಸಂಗತಿ.

ಹಾಗೆಯೇ ಕಾಳಿದಾಸನು ಕೌತ್ಸನ ಗುರುಭಕ್ತಿ; ರಘುವಿನ, ಶ್ರವಣಕುಮಾರರ ಪಿತೃಭಕ್ತಿಯನ್ನೂ ಚೆನ್ನಾಗಿ ನಿರೂಪಿಸಿದ್ದಾನೆ. ರಘುವಂಶದ ೧೦ನೇ ಸರ್ಗದಲ್ಲಿ ಬರುವ 'ದೇವತಾ ಸ್ತೋತ್ರ'ವು ಅಪೂರ್ವವಾಗಿದೆ:

ದುಷ್ಟ ರಾವಣನು ಋಷಿಗಳಿಗೆ, ಮಹಾತ್ಮರಿಗೆ ತೊಂದರೆ ಕೊಡುತ್ತಿರುತ್ತಾನೆ. ದೇವತೆಗಳೆಲ್ಲ ಪರಮಾತ್ಮನನ್ನು ಸ್ತುತಿಸಿ ಲೋಕವನ್ನೂ, ತಮ್ಮನ್ನೂ ಕಾಪಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತಾರೆ. ಈ ಪ್ರಾರ್ಥನೆಯು ಸಕಲ ವೇದರಾಶಿಯ ಸಾರದಂತಿದೆ. ಕಾಳಿದಾಸನ ಭಕ್ತಿಯೇ ಇಲ್ಲಿ ಸ್ತೋತ್ರರೂಪದಲ್ಲಿ ಹೊರಹೊಮ್ಮಿದೆ.

**ನಮೋ ವಿಶ್ವಸೃಜೇ ಪೂರ್ವಂ ವಿಶ್ವಂತದನುಬಿಭ್ರತೇ ।**
**ಅಥ ವಿಶ್ವಸ್ಯ ಸಂಹರ್ತ್ರೇ ತುಭ್ಯಂ ತ್ರೇಧಾಸ್ಥಿತಾತ್ಮನೇ ॥**

"ವಿಶ್ವದ ಪ್ರಾರಂಭದಲ್ಲಿ ಸೃಷ್ಟಿಕರ್ತನಾಗಿ, ನಂತರ ಅದರ ರಕ್ಷಕನಾಗಿ, ಆಮೇಲೆ ಎಲ್ಲವನ್ನೂ ಉಪಸಂಹಾರ ಮಾಡಿಕೊಳ್ಳುವ ತ್ರಿಮೂರ್ತಿರೂಪನಿಗೆ ನಮಸ್ಕಾರ."

"ಆಕಾಶದಿಂದ ಬಿದ್ದ ನೀರು ಬೇರೆ ಬೇರೆ ಜಾಗಗಳಲ್ಲಿ ಬಿದ್ದು ಭಿನ್ನ ಭಿನ್ನವಾದ ರುಚಿಯನ್ನು ಪಡೆವಂತೆ ಸತ್ತ್ವಗುಣ, ರಜೋಗುಣ, ತಮೋಗುಣಗಳ ಕಾರಣ ನೀನೂ ಬೇರೆ ಬೇರೆಯ ಹೆಸರಿನಿಂದ ಕರೆಯಲ್ಪಡುವೆ. ಬೇರೆ ಬೇರೆಯ ಕೆಲಸ—ಶಕ್ತಿಯ ಕಾರಣ ನಾವು ಪರಮಾತ್ಮನನ್ನು ಬೇರೆ ಬೇರೆಯ ಹೆಸರಿನಿಂದ ಕೂಗುವುದಿಲ್ಲವೇ? **ಸ ಬ್ರಹ್ಮ ಸ ಶಿವಃ ಸ ಹರಿಃ ಸೇಂದ್ರಃ ಸೋಽಕ್ಷರಃ ಪರಮಃ ಸ್ವರಾಟ್**—ಅವನು ಬ್ರಹ್ಮ, ಅವನು ಶಿವ, ಅವನು ಹರಿ, ಅವನೇ ಇಂದ್ರ, ನಾಶರಹಿತನೂ, ಪರಮನೂ ಆದ ಈಶ್ವರ.

"ನಿನ್ನನ್ನು ಅಳೆಯಲು ಸಾಧ್ಯವಿಲ್ಲ. ಆದರೆ ನೀನು ತ್ರಿವಿಕ್ರಮನಾಗಿ ಮೂರು ಲೋಕಗಳನ್ನೂ ಅಳೆದಿದ್ದೀಯೆ. ನಿನಗೆ ಆಸೆಯೇ ಇಲ್ಲ, ಆದರೆ ನೀನು ಎಲ್ಲರ ಆಸೆಯನ್ನೂ ಪೂರ್ಣಗೊಳಿಸುವೆ. ನಿನ್ನನ್ನು ಯಾರೂ ಗೆಲ್ಲಲು ಸಾಧ್ಯವಿಲ್ಲ, ನೀನು ಎಲ್ಲರನ್ನೂ ಗೆದ್ದಿರುವೆ. ನೀನೋ ಅಗೋಚರ, ಅವ್ಯಕ್ತ; ಆದರೆ ದೃಗ್ಗೋಚರವಾದ ಈ ಪ್ರಪಂಚವನ್ನು ಸೃಷ್ಟಿಸಿರುವೆ. ಏಕನಾಗಿಯೂ ಅನೇಕವಾಗಿ ಮೆರೆಯುತ್ತಿರುವೆ. ಉಪನಿಷತ್ತುಗಳು ಘೋಷಿಸುವಂತೆ **ಸ ಏಕಃ ಸ ಯ ಏವಂ ವಿತ್**—ಅವನು ಒಬ್ಬನೇ ಎಂದು ತಿಳಿಯಬೇಕು. ಆದರೂ **ತ್ವಂ ಬ್ರಹ್ಮಾ ತ್ವಂ ವಿಷ್ಣುಃ ತ್ವಂ ರುದ್ರಃ ತ್ವಮಿಂದ್ರಃ ತ್ವಂ ಅಗ್ನಿಃ ತ್ವಂ ವಾಯುಃ, ತ್ವಂ ಸೂರ್ಯಃ ತ್ವಂ ಚಂದ್ರಮಾಃ ತ್ವಂ ಬ್ರಹ್ಮ ಭೂರ್ಭುವಸ್ಸುವರೋಂ**—ನೀನೇ ಬ್ರಹ್ಮ, ವಿಷ್ಣು, ರುದ್ರ, ಇಂದ್ರ, ಅಗ್ನಿ, ವಾಯು, ಸೂರ್ಯ, ಚಂದ್ರಗಳು ಹಾಗೂ ಬ್ರಹ್ಮಲೋಕ ಸೇರಿದಂತೆ ಎಲ್ಲ ಲೋಕಗಳು ಕೂಡ.

"ನೋಡುವ ಕಣ್ಣುಗಳಿಗೆ, ಮನಗಳಿಗೆ ಅನೇಕವಾಗಿ ನೀನು ಕಂಡಿದ್ದೀಯೆ. ನಿನ್ನಿಂದಲೇ ನಾಲ್ಕು ಯುಗಗಳು, ಸಪ್ತರ್ಷಿಗಳು, ಋತುಗಳು, ಚಾತುರ್ವರ್ಣ್ಯಗಳು ಎಲ್ಲವೂ ಉತ್ಪತ್ತಿಯಾಗಿವೆ. ಎಲ್ಲ ಯೋಗಿಗಳ ಹೃದಯದಲ್ಲಿ ಬೆಳಗುತ್ತ, ತಮಸ್ಸಿನಿಂದ ದಾಟಿಸಿ ಅವರಿಗೆ ಮುಕ್ತಿ ಕೊಡುವೆ. ಮೋಕ್ಷವನ್ನು ಪಡೆಯಲು ನಾನಾ ದಾರಿಗಳಿದ್ದರೂ, ಬೇರೆ ಬೇರೆ ಶಾಸ್ತ್ರಗಳು

ವಿವಿಧವಾಗಿ ಹೇಳಿದ್ದರೂ ಪವಿತ್ರವಾದ ಜಾಹ್ನವಿಯು ಬೇರೆ ಬೇರೆ ಹೆಸರುಗಳಾದ ಅಲಕನಂದಾ, ಮಂದಾಕಿನೀ, ಭಾಗೀರಥಿ, ಗಂಗಾ ಎಂಬ ವಿವಿಧ ಹೆಸರುಗಳ ಮೂಲಕ ಬೇರೆ ಬೇರೆ ಸೀಳುಗಳಾಗಿ ಹರಿದರೂ ಕೊನೆಗೆ ಸಮುದ್ರದಲ್ಲಿಯೇ ಲೀನವಾಗುವಂತೆ, ನಿನ್ನಲ್ಲಿ ಎಲ್ಲವೂ ಲೀನವಾಗುತ್ತವೆ. ನಿನ್ನನ್ನೇ ಆಶ್ರಯಿಸಿದವರೆ ಪುನರ್ಜನ್ಮವಿಲ್ಲ." **ತ್ವಯ್ಯೇವ ನಿಪತಂತ್ಯೋಘಾ ಜಾಹ್ನವೀಯಾ ಇವಾರ್ಣವೇ.** "ಯಾರು ತಾನೆ ನಿನ್ನ ನೆಲೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯ! ಅಜನಾದರೂ ಜನ್ಮ ಧರಿಸುವೆ. ಚೇಷ್ಟಾರಹಿತನಾದರೂ ಶತ್ರುಗಳನ್ನು ಸಂಹರಿಸುರುವೆ. ಯೋಗನಿದ್ರೆಯಲ್ಲಿದ್ದರೂ ಚೇತನಸ್ವರೂಪನಾಗಿ ಕಾಪಾಡುವೆ. ವೇದಗಳಿಗೂ ತಿಳಿಯಲು ಕಷ್ಟನಾಗಿರುವ ಅಥವಾ ವೇದದಿಂದ ಮಾತ್ರ ತಿಳಿಯಲ್ಪಡಬಹುದಾದ ನಿನ್ನನ್ನು ನಾವು ಹೇಗೆ ತಾನೆ ಅರಿಯಬಲ್ಲೆವು?" **ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ**—ವಾಕ್ಕು ಮತ್ತು ಮನಸ್ಸು ಮುಟ್ಟಲಾರದೆ ಎಲ್ಲಿಂದ ಮರಳುತ್ತವೆಯೋ ಎಂಬ ಉಪನಿಷತ್ತಿನ ಭಾವನೆಯನ್ನು ಕವಿ ಇಲ್ಲಿ ವಿವರಿಸಿದ್ದಾನೆ. ಕಾಳಿದಾಸನ ಈ ಶ್ಲೋಕಗಳನ್ನು ನಾವು ಮೆಲಕು ಹಾಕುತ್ತಿದ್ದರೆ ವೇದರಾಶಿಯನ್ನೇ ಭಟ್ಟಿ ಇಳಿಸಿದ್ದಾನೆಯೋ, ಪುರುಷಸೂಕ್ತ ಮಂತ್ರಕ್ಕೆ ಸಂಸ್ಕೃತಶ್ಲೋಕದ ಮೂಲಕ ವಿವರಣೆ ಕೊಟ್ಟಿದ್ದಾನೆಯೋ ಎಂಬ ಭಾವನೆಯನ್ನು ಮೂಡಿಸಿ ನಮ್ಮನ್ನು ಆನಂದಸಾಗರದಲ್ಲಿ ಮೀಯಿಸುತ್ತಾನೆ. "ಪರಮಾತ್ಮನ ಗುಣಗಳಿಗೆ ಕೊರತೆಯಿಲ್ಲ. ಆದರೆ ನಮ್ಮ ನ್ಯೂನತೆಯಿಂದ ನಾವು ನಮ್ಮ ಮಾತನ್ನು ಮೊಟಕುಗೊಳಿಸುತ್ತೇವೆ" ಎಂದು ದೇವತೆಗಳು ಭಕ್ತಿಯಿಂದ, ನಮ್ರತೆಯಿಂದ ತಮ್ಮ ಸ್ತುತಿಯನ್ನು ಮುಗಿಸಿ, ದುಷ್ಟ ರಾವಣನಿಂದ ತಮ್ಮನ್ನು ಕಾಪಾಡಬೇಕೆಂದು ಪ್ರಾರ್ಥಿಸುತ್ತಾರೆ. **ಶ್ರಮೇಣ ತದಶಕ್ತ್ಯಾ ವಾ ನ ಗುಣಾನಾಂ ಇಯತ್ತಯಾ।** ಶ್ರಮದಿಂದ ಅಥವಾ ವಿವರಿಸಲಾಗದ ಅಸಾಮರ್ಥ್ಯದಿಂದ ನಿಲ್ಲಿಸಿದರೇ ಹೊರತು ಭಗವಂತನ ಗುಣಗಳ ಕೊರತೆಯಿಂದಲ್ಲ.

**ಮೇಘದೂತಃ**

ಮೇಘದೂತವು ಸಂದೇಶಕಾವ್ಯಗಳಲ್ಲಿಯೇ ಅತ್ಯುತ್ತಮ. **ಮಾಘೇ ಮೇಘೇ ಗತಂ ವಯಃ** ಮಾಘಕವಿಯನ್ನು ಹಾಗೂ ಮೇಘದೂತವನ್ನು ತಿಳಿಯುವುದರಲ್ಲಿ, ವರ್ಣಿಸುವಲ್ಲಿಯೇ ನಮ್ಮ ಜೀವನವೆಲ್ಲ ಮುಗಿದಿದೆ ಎಂದು ಭಾಷ್ಯಕಾರ ಮಲ್ಲಿನಾಥನೇ ನುಡಿದಿಲ್ಲವೇ? ಪ್ರೇಮಮಯವಾದ ಖಂಡಕಾವ್ಯದಲ್ಲಿ ಎಂತಹ ಭಕ್ತಿ, ದೇಶಪ್ರೇಮವನ್ನು ಚಿತ್ರಿಸಿದ್ದಾನೆ ಕಾಳಿದಾಸ! ಇವನ ಈ ಕೃತಿಯನ್ನು ಓದುವುದಕ್ಕಾದರೂ ಮಕ್ಕಳು ಸಂಸ್ಕೃತವನ್ನು ಕಲಿಯಬೇಕು.

ಯಕ್ಷ ವಾಸಮಾಡುವ ಸ್ಥಳ ಯಾವುದೋ ಗುಡ್ಡಗಾಡಲ್ಲ. ಅದು ರಾಮನ ಇರುವಿಕೆಯಿಂದ ಪುನೀತವಾದ ಆಶ್ರಮವಂತೆ, ಸೀತೆಯು ಸ್ನಾನ ಮಾಡಿದ ಪವಿತ್ರ ಸರೋವರವುಳ್ಳ ಆಶ್ರಮವಂತೆ. ಲೋಕದಲ್ಲಿ ಗಂಗಾದಿ ನದಿಗಳಲ್ಲಿ ಸ್ನಾನ ಮಾಡಿದರೆ ನಾವು ಪುನೀತರಾಗುತ್ತೇವೆ. ಆದರೆ ಇಲ್ಲಿ ಸೀತೆಯ ಸ್ನಾನದಿಂದ ಸರೋವರವೇ ಪವಿತ್ರಗೊಳ್ಳುವುದಾದರೆ ಸೀತೆಯ ಪಾವಿತ್ರ್ಯ ಎಂಥದು! ಅವಳ ಕುರಿತಂತೆ ಕಾಳಿದಾಸನಿಗೆ ಎಂತಹ ಭಕ್ತಿ! '**ಯಕ್ಷಃ ಚಕ್ರೇ ಜನಕತನಯಾ ಸ್ನಾನ ಪುಣ್ಯೋದಕೇಷು**'. ಇಂತಹ ಯಕ್ಷ ತನ್ನ ಮಡದಿಯಿಂದ, ಕರ್ತವ್ಯ ಭ್ರಷ್ಟತೆಯ ಕಾರಣ ದೂರನಾಗಿದ್ದರೂ, ಹೆಂಡತಿಗೋಸ್ಕರ ಪರಿತಪಿಸುತ್ತಿದ್ದರೂ, ಮನಸ್ಸಿನಲ್ಲಿ ನಿಶ್ಚಲವಾದ ಭಕ್ತಿಯಿಂದ ಕೂಡಿದ್ದಾನೆ. ಮೇಘದ ಮೂಲಕ ತನ್ನ ಪ್ರೇಮಸಂದೇಶವನ್ನು ಕಳುಹಿಸುವಾಗ "ಎಲೆ ಮೇಘವೆ, ಈ ಪರ್ವತಗಳನ್ನು ಹಾದು ಹೋಗುವಾಗ ನೀನು ರಘುರಾಮನ ಚರಣಗಳನ್ನು ಕಾಣಬಹುದು. ಅವುಗಳಿಗೆ ಪ್ರದಕ್ಷಿಣೆ ಮಾಡಿ ಮುಂದೆ ಹೋಗು. ಈ ಪರ್ವತಗಳು ರಘುರಾಮನ ಹೆಜ್ಜೆಯ ಗುರುತುಗಳಿಂದ ಪವಿತ್ರಗೊಂಡಿವೆ", ಎನ್ನುತ್ತಾನೆ ಕಾಳಿದಾಸ. '**ರಘುಪತಿಪದೈಃ ಅಂಕಿತಂ ಮೇಖಲಾಸು**'.

"ಹಾಗೇ ಮುಂದುವರಿದು ಹೋಗುವಾಗ ಅವೇಳೆಯಾದರೂ ಉಜ್ಜಯನಿಯ ಮಹಾಕಾಲನ ದರ್ಶನ ಮಾಡದೆ ಮುಂದೆ ಹೋಗಬೇಡ. ಮಹಾಕಾಲನ ದರ್ಶನಕ್ಕಾಗಿ, ಸೇವೆಗಾಗಿ ಜನರು ಕಾಯುತ್ತಿರುತ್ತಾರೆ. ಪ್ರದೋಷ ಸಂದರ್ಭದಲ್ಲಿ ಕಿನ್ನರ ಸ್ತ್ರೀಯರು ಸುಶ್ರಾವ್ಯವಾಗಿ ಭಕ್ತಿಯಿಂದ ಹಾಡುವಾಗ, ಪಕ್ಕದಲ್ಲಿ ಬೆಳೆದಿರುವ ಬಿದಿರು ಮೆಳೆಗಳು ವೇಣುನಾದವನ್ನು ಉಂಟುಮಾಡುತ್ತವೆ. ಅದೇ ಹೊತ್ತಿಗೆ **ಆಮಂದ್ರಾಣಾಂ ಫಲಮವಿಕಲಂ ಲಪ್ಸ್ಯಸೇ ಗರ್ಜಿತಾನಾಂ** ನೀನು ಮುರಜದಂಥ ಮಧ್ಯಮ ಸ್ವರದಿಂದ ನಿನ್ನ ಗುಡುಗಿನ ನಾದವನ್ನು ಉಂಟುಮಾಡಿದ್ದೇ ಆದರೆ ಗಾನಲೋಲನಾದ ಶಿವನಿಗೆ ವಾದ್ಯ ಸಮೇತವಾದ ಸಂಗೀತಸೇವೆ ನಡೆದು, ನಿನ್ನ ಸೇವೆಗೆ ಮೆಚ್ಚಿ ನಿನಗೆ ಪುನರ್ಜನ್ಮವಿಲ್ಲದಂತೆ ಮಾಡಿ ನಿನ್ನನ್ನು ಭಕ್ತಶ್ರೇಷ್ಠನನ್ನಾಗಿ ಮಾಡಿಕೊಳ್ಳುತ್ತಾನೆ," ಎನ್ನುವ ಮಾತು ಎಷ್ಟು ಹೃದಯಂಗಮವಾಗಿದೆ! ಮೋಡವೆಲ್ಲಿ, ಅದರ ನಾದವೆಲ್ಲಿ, ಚೇತನಯುತರಾದ ನಾವೆಲ್ಲಿ? ಸುಮ್ಮನೆ ಗುಡುಗುವ ಮೋಡಕ್ಕೇ ಮೋಕ್ಷ ದೊರೆಯುವುದಾದರೆ, ಭಕ್ತಿಯಿಂದ ಭಜಿಸಿದರೆ ನಾವು ಪಡೆದುಕೊಳ್ಳಲಾರದ್ದು ಏನಿದೆ?

"ಹೇ ಮೇಘ! ಹಾಗೆಯೇ ಮುಂದೆ ಹೋಗು. ಅಲ್ಲಿ ಸ್ಕಂದನ (ಸುಬ್ರಹ್ಮಣ್ಯನ) ಕ್ಷೇತ್ರವಿದೆ. ನೀನು ತುಂತುರು ಹನಿಗಳಿಂದ ಸುಬ್ರಹ್ಮಣ್ಯನಿಗೆ ಅಭಿಷೇಕ ಮಾಡು. ನಿನಗೆ ಮಂಗಳ

ವಾಗುತ್ತದೆ. ಜೊತೆಗೆ ಶಿವಪಾರ್ವತಿಯರ ಕೃಪೆಗೂ ಪಾತ್ರನಾಗುವೆ. ಅಷ್ಟೇ ಅಲ್ಲ, ಇನ್ನೂ ಉತ್ತರ ದಿಕ್ಕಿಗೆ ಹೋಗು. ಅಲ್ಲಿರುವ ಸರಸ್ವತೀ ನದಿಯ ನೀರನ್ನು ಕುಡಿ. ಹಿಂದೆ ದ್ರಾಕ್ಷಾದಿ ರಸಗಳನ್ನು ಪಾನಮಾಡುತ್ತಿದ್ದ ಬಲರಾಮನೇ ಈ ನದಿಯ ಉದಕವನ್ನು ಕುಡಿದು ಪವಿತ್ರಗೊಂಡಿದ್ದಾನೆ. **ಅಂತಃ ಶುದ್ಧಃ ತ್ವಮಪಿ ಭವಿತಾ ವರ್ಣಮಾತ್ರೇಣ ಕೃಷ್ಣಃ** ನಿನ್ನ ಹೊರಮೈ ಕಪ್ಪು ಬಣ್ಣವಾದರೂ ನೀನು ಅಂತರಂಗದಲ್ಲಿ ಪರಿಶುದ್ಧನಾಗುತ್ತೀಯ" ಎಂದು ಹೇಳುವಾಗ ನಾವೂ ಕೂಡ ಭಕ್ತಿಯಿಂದ ತ್ರಿವೇಣೀ ಸಂಗಮಕ್ಕೆ ಹೋಗಿ, ಸ್ನಾನಮಾಡಿ ತೀರ್ಥವನ್ನು ಸ್ವೀಕರಿಸಿ ಪೂತರಾದೆವೋ ಎಂಬ ಭಾವನೆಯನ್ನು ಕವಿ ನಮ್ಮಲ್ಲಿ ಉಂಟುಮಾಡುತ್ತಾನೆ.

"ಮುಂದೆ ಹಿಮಾಲಯಕ್ಕೆ ಹೋಗಿ ಚಂದ್ರಮೌಳಿಯ ಪಾದದರ್ಶನ ಮಾಡು. ನಿನಗೆ ಮುಕ್ತಿಸಾಮ್ರಾಜ್ಯವೇ ಸಿಗುತ್ತದೆ" ಎಂದು ಹೇಳುವ ಮೂಲಕ ಪರಮಾತ್ಮನ ಬಗ್ಗೆ, ದೇಶದ ಬಗ್ಗೆ, ನದಿಗಳ ಬಗ್ಗೆ, ಪ್ರಕೃತಿಯ ಬಗ್ಗೆ ತನ್ನ ಭಕ್ತಿಯನ್ನೂ, ಪ್ರೇಮವನ್ನೂ ಕಾಳಿದಾಸನು ಬಹಳ ಸೊಗಸಾಗಿ ಚಿತ್ರಿಸಿದ್ದಾನೆ.

ಕಾಳಿದಾಸನ ಎಲ್ಲ ಕೃತಿಗಳಲ್ಲೂ ಭಕ್ತಿಯ ರಸವನ್ನು ಕಾಣಬಹುದು. ಕುಮಾರಸಂಭವ, ರಘುವಂಶ, ಮೇಘದೂತಗಳಲ್ಲಿನ ಕೆಲವು ಉತ್ತಮ ಪ್ರಸಂಗಗಳನ್ನು ಮಾತ್ರ ಇಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಲೇಖನ ತುಂಬ ದೀರ್ಘವಾಗುವುದೆಂಬ ಕಾರಣದಿಂದ ನಾಟಕಗಳನ್ನು ಪರಿಶೀಲಿಸಿಲ್ಲ. ಕಾಳಿದಾಸನ ಭಕ್ತಿಪಾರಮ್ಯವನ್ನು ವರ್ಣಿಸಲೂ ಒಂದು ರೀತಿಯಲ್ಲಿ ನಾನು ಅಸಮರ್ಥ. ಕಾಳೀದೇವಿಯ ಕೃಪೆಯಿಂದ ಭಾಷೆಯ ಪಾಂಡಿತ್ಯ ಹಾಗೂ ಕವಿದೃಷ್ಟಿಯನ್ನು ಪಡೆದುಕೊಂಡವನು ಕಾಳಿದಾಸ; ಇವನಲ್ಲಿ ಭಕ್ತಿಯ ಅಭಾವವಿರಲು ಸಾಧ್ಯವೇ? ಕಾಳಿದಾಸನ ಕೃತಿಗಳನ್ನು ಮತ್ತಷ್ಟು ಓದಲು ಈ ಲೇಖನ ಪ್ರೇರಣೆ ನೀಡಲಿ ಎಂಬುದಷ್ಟೇ ನನ್ನ ಹಾರೈಕೆ. ✪



## ಸ್ವಾಮಿ ಅದ್ಭುತಾನಂದರು

ಸ್ವಾಮಿ ವಿವೇಕಾನಂದರು ಒಮ್ಮೆ "ಲಾಟು, ಶ್ರೀರಾಮಕೃಷ್ಣರ ಒಂದು ಮಹಾಪವಾಡ. ಸ್ವಲ್ಪವೂ ವಿದ್ಯಾಭ್ಯಾಸ ಇಲ್ಲದಿದ್ದರೂ, ಕೇವಲ ಶ್ರೀರಾಮಕೃಷ್ಣರ ಸಂಪರ್ಕದಿಂದಾಗಿ ಅವನು ಅತ್ಯುನ್ನತ ವಿವೇಕವನ್ನು ಪಡೆದುಕೊಂಡನು" ಎಂದು ಉದ್ಗರಿಸಿದರು. ಸ್ವಾಮಿ ತುರೀಯಾನಂದರೂ ಅವರ ಬಗ್ಗೆ 'ನಮ್ಮಲ್ಲಿ ಅನೇಕರು ಭಗವತ್ಸಾಕ್ಷಾತ್ಕಾರಕ್ಕಿಂತ ಮೊದಲು ಬೌದ್ಧಿಕ ಜ್ಞಾನದ ಕೆಸರು ನೀರಿನಲ್ಲಿ ಹಾಯ್ದು ಬರಬೇಕಾಯಿತು. ಆದರೆ ಲಾಟು, ಹನುಮಂತನ ಹಾಗೆ ಹಾರಿ ಬಂದುಬಿಟ್ಟ. ಪ್ರಪಂಚದ ಕೊಳಕನ್ನು ಮುಟ್ಟಿಸಿಕೊಳ್ಳದೆ ಭಗವದ್ಭಾವದಲ್ಲಿ ಹೇಗೆ ಬದುಕಬೇಕೆಂಬುದನ್ನು ಅವನ ಜೀವನ ನಮಗೆ ತೋರಿಸಿಕೊಡುತ್ತದೆ" ಎಂದು ಹೇಳಿರುವರು.

## ಸ್ವಾಮಿ ತ್ರಿಗುಣಾತೀತಾನಂದರು

ತ್ರಿಗುಣಾತೀತರು ಸತ್ಯಪರಾತ್ಪರರಾಗಿದ್ದರು. ಒಮ್ಮೆ ಅಮೆರಿಕದಲ್ಲಿ ಖ್ಯಾತ ಪಾದ್ರಿಗಳೊಬ್ಬರು ಅವರನ್ನು ಭೋಜನಕ್ಕೆ ಆಮಂತ್ರಿಸಿದ್ದರು. ಇವರು ಸ್ವಾಮಿಗಳ ಸ್ನೇಹಿತರೂ ಅಭಿಮಾನಿಯೂ ಆಗಿದ್ದರು. ಭೋಜನಾನಂತರ "ಊಟ ಚೆನ್ನಾಗಿತ್ತೆ?" ಎಂದು ಸ್ವಾಮಿಗಳನ್ನು ವಿಚಾರಿಸಿದರು. ಸ್ವಾಮಿಗಳು ಏನನ್ನೂ ಹೇಳದೆ ಸುಮ್ಮನಿದ್ದರು. ತ್ರಿಗುಣಾತೀತರ ಅಭಿಪ್ರಾಯವನ್ನು ತಿಳಿಸಬೇಕೆಂದು ಒತ್ತಾಯಿಸಿದ ಮೇಲೆ "ಅಪ್ರಿಯವಾದ ಸತ್ಯವನ್ನು ಹೇಳಲು ನನಗೆ ಕಷ್ಟವಾಗುತ್ತದೆ. ನಿಜವಾಗಿಯೂ ನನಗೆ ಇಂತಹ ಆಹಾರ ಸೇರುವುದಿಲ್ಲ" ಎಂದರು. ಆ ಪಾದ್ರಿಗೆ ಸ್ವಲ್ಪ ಆಘಾತವಾದರೂ, ತ್ರಿಗುಣಾತೀತರ ನೇರವಂತಿಕೆ ಹಾಗೂ ಸತ್ಯಪ್ರೇಮವನ್ನು ಪ್ರಶಂಸಿಸಿದರು: "ನೀವು ಸಾಮಾಜಿಕ ಸಭ್ಯತೆಗಾಗಲಿ, ಸ್ನೇಹಕ್ಕಾಗಲಿ ಸತ್ಯದಿಂದ ವಿಚಲಿತರಾಗುವುದಿಲ್ಲವೆಂದು ನನಗೆ ಗೊತ್ತು. ಆದರೆ, ಇನ್ನು ಮುಂದೆ ಆಹ್ವಾನಿತರಾದಾಗ ದಯವಿಟ್ಟು ಇಂತಹ ಕಠೋರ ಸತ್ಯವನ್ನು ಹೇಳಬೇಡಿ; ಕರೆದವರು ನಿಮ್ಮನ್ನು ಟೀಕಿಸಿಯಾರು" ಎಂದೂ ಸೇರಿಸಿದರು. ಇನ್ನೊಮ್ಮೆ ಇಂತಹ ಸಂದರ್ಭ ಬಾರದಿರಲೆಂದು ಸ್ವಾಮಿಗಳು ಆ ಹೊತ್ತಿನಿಂದಲೇ ಮತ್ತೆ ಯಾರಿಂದಲೂ ಭೋಜನಕ್ಕೆ ಆಹ್ವಾನವನ್ನು ಸ್ವೀಕರಿಸಲೇ ಇಲ್ಲ. ✪

